ವಿಶೇಷ ಸ್ಥಾನಮಾನ

775(795) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನವನ್ನು ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹೇರಲು ಇಲ್ಲಿಯವರೆವಿಗೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

ಆ ಕಳೆದ 2 ವರ್ಷಗಳಲ್ಲಿ ಈ ವಿಷಯದ ಬಗ್ಗೆ ಕೇಂದ್ರಕ್ಕೆ ಎಷ್ಟು ಬಾರಿ ಸರ್ವ ಪಕ್ಷಗಳ ನಿಯೋಗವನ್ನು ಕೊಂಡೊಯ್ಯಲಾಗಿದೆ; ಕೇಂದ್ರದ ಜೊತೆ ಎಷ್ಟು ಪತ್ರ ವ್ಯವಹಾರಗಳನ್ನು ನಡೆಸಿದೆ; ರಾಜ್ಯದ ಅಧಿಕಾರಿಗಳು ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಎಷ್ಟು ಬಾರಿ ಚರ್ಚಿಸಿದ್ದಾರೆ.

ಇ ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಏನು;

ಈ ಎಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿರುವ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನಕ್ಕಾಗಿ ಒತ್ತಡ ಹೇರಲು ರಾಜ್ಯ ಸರ್ಕಾರ ಮತ್ತೊಮ್ಮೆ ಸರ್ವ ಪಕ್ಷಗಳ ನಿಯೋಗವನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗುವ ಬಗ್ಗೆ ಪರಿಶೀಲಿಸುವುದೇ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುತ್ತಿದೆ. ಈ ವಿಚಾರದಲ್ಲಿ ಇದುವರೆವಿಗೂ ಕೇಂದ್ರ ಸರ್ಕಾರಕ್ಕೆ 7 ಬಾರಿ ನಿವೇದನ ಪತ್ರ (memoranda) ಸಲ್ಲಿಸಿದೆ ಹಾಗೂ 18 ಬಾರಿ ಪತ್ರ ವ್ಯವಹಾರ ಮಾಡಿದೆ.

ಆ ಕಳೆದ 2 ವರ್ಷಗಳಲ್ಲಿ ಈ ಬಗ್ಗೆ ಒಂದು ಬಾರಿ ಸರ್ವ ಪಕ್ಷಗಲ ನಿಯೋಗವನ್ನು ಕೊಂಡೊಯ್ಯಲಾಗಿದೆ. ಕೇಂದ್ರದ ಜೊತೆ 18 ಬಾರಿ ಪತ್ರ ವ್ಯವಹಾರ ಮಾಡಲಾಗಿದೆ. ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆದಿಲ್ಲ.

ಇ ಕೇಂದ್ರ ಸರ್ಕಾರವು ಮಹಾರಾಷ್ಟ್ರದಲ್ಲಿ ಇರುವಂತೆ ಅಭಿವೃದ್ಧಿ ಮಂಡಳಿಗಳನ್ನು ರಚಿಸಬೇಕೆಂದು ಸಲಹೆ ನೀಡಿದೆ. ಆದರೆ, ಈ ಪ್ರಸ್ತಾವನೆಗೆ ರಾಜ್ಯ ಸರ್ಕಾರವು ಒಪ್ಪಿಗೆ ನೀಡಿಲ್ಲ.

ಈ ಈ ವಿಚಾರ ಪರಿಶೀಲನೆಯಲ್ಲಿದೆ.

ಸೌರ ವಿದ್ಯುತ್ ಉತ್ಪಾದನಾ ಘಟಕದ ಸ್ಥಾಪನೆ

776(796) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ನಿಗಮ ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೋಲಾರ ಜಿಲ್ಲೆಯ ಯಳೇಸಂದ್ರ ಗ್ರಾಮದಲ್ಲಿ ಸೋಲಾರ್ ಫೋಟೋ ವೋಲ್ಟಾಯಿಕ್ ಘಟಕವನ್ನು ಇತ್ತೀಚೆಗೆ ಸ್ಥಾಪಿಸಿರುವುದು ನಿಜವಲ್ಲವೆ; ಈ ಘಟಕದ ವೈಶಿಷ್ಟ್ಯವೇನು;

ಆ) ಈ ಘಟಕದಿಂದ ಉತ್ಪಾದನೆಯಾಗುವ ವಿದ್ಯುತ್ತಿನ ಪ್ರಮಾಣವೆಷ್ಟು; ಇದರಿಂದ ಎಷ್ಟು ಗ್ರಾಮಗಳಿಗೆ ಅನುಕೂಲವಾಗುತ್ತದೆ;

ಇ) ಈ ಘಟಕದ ಸ್ಥಾಪನೆಗೆ ತಗುಲಿದ ವೆಚ್ಚವೆಷ್ಟು; ಈ ಪೈಕಿ ರಾಜ್ಯ ಸರ್ಕಾರದ ಪಾಲೆಷ್ಟು; ಹಾಗೂ ಕೇಂದ್ರ ಸರ್ಕಾರ ನೀಡಿರುವ ನೆರವಿನ ಮೊತ್ತವೆಷ್ಟು.

ಈ) ಬೀದರ್ ಜಿಲ್ಲೆಯಲ್ಲಿಯೂ ಸಹ ವಿದ್ಯುತ್ತಿನ ತೀವ್ರ ಅಭಾವವಿರುವುದರಿಂದ ಹಾಗೂ ಬೀದರ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿಸಿಲಿನ ಪ್ರಮಾಣ ಹೆಚ್ಚಿರುವುದರಿಂದ ಬೀದರ್ ಜಿಲ್ಲೆಯಲ್ಲಿಯು ಸಹ ಇಂತಹ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ;

ಉ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿ)

ಅ) ಹೌದು. ಈ ಯೋಜನೆಯು ಭಾರತದಲ್ಲಿ ಮೊಟ್ಟ ಮೊದಲನೆ 3 ಮೆ.ವ್ಯಾ. ಸೋಲಾರ್ ಫೋಟೋ ವೋಲ್ಟಾಯಿಕ್ ಘಟಕವಾಗಿರುತ್ತದೆ ಹಾಗೂ ಗ್ರಿಡ್‌ಗೆ ಸಂಪರ್ಕ ಕಲ್ಪಿಸಲಾಗಿದೆ.